ಶ್ರೀ ಎಸ್. ಎಸ್. ಅರಕೇರಿ. ರಾಜ್ಯದಲ್ಲಿನ ಎಷ್ಟು ಮಹಿಳಾ ಕಲ್ಯಾಣ ಸಂಘಟಕರುಗಳ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ ೭೬೮ ಎಂದು ಉತ್ತರ ನೀಡಿದ್ದೀರಿ. ಇವರಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಯವರು ಎಂದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ೬ ಬೆಂಗಳೂರು ಪಟ್ಟಣದಲ್ಲಿ ೬, ಗುಲ್ಬರ್ಗಾದಲ್ಲಿ ೫ ಎಂದು ಇವ್ರಿ ಅಂಕಿಗಳನ್ನು ಕೊಟ್ಟಿದ್ದೀರಿ. ಇಷ್ಟೊಂದು ಅಲ್ಪ ಪ್ರಮಾಣದಲ್ಲಿ ಇವರ ನೇಮಕಕ್ಕೆ ಇರುವುದಕ್ಕೆ ಕಾರಣವಾದರೂ ಏನು ಎಂದು ತಿಳಿಸುತ್ತೀರಾ ? ಮುಂದಾ ಇನ್ನು ಮುಂದಾದರೂ ಹರಿಜನ ಗಿರಿಜನರಿಗೆ ಸಮೂಹ ಪ್ರಾತಿನಿಧ್ಯವನ್ನು ಕೊಡುತ್ತೀರಾ ?

† ಶ್ರೀಮತಿ ಮನೋರಮಾ ಮಧ್ವರಾಜ್.—ಹರಿಜನ ಗಿರಿಜನರಿಂದ ಎಷ್ಟು ಅರ್ಜಿಗಳು ಬಂದಿದ್ದುವೋ ಅಷ್ಟಕ್ಕೂ ನಾವು ಪ್ರಾತಿನಿಧ್ಯವನ್ನು ಕೊಟ್ಟಿದ್ದೇವೆ. ಇನ್ನೂ ಜಾಸ್ತಿ ಬಂದರೆ ಅಷ್ಟಕ್ಕೂ ಕೊಡುತ್ತೇವೆ. ಆದರೆ ಉದ್ದೇಶ ಪೂರ್ತಿಕವಾಗಿ ಇಲ್ಲಿ ಕೊಡಿಸಿ ಕೊಟ್ಟಿಲ್ಲ. ಬಂದಿದ್ದ ಅರ್ಜಿಗಳೇ ಅಷ್ಟು.

ಶ್ರೀ ಎಸ್. ಎಸ್. ಅರಕೇರಿ.—ಸಮೂಹ ಕಲ್ಯಾಣ ಇಲಾಖೆ ಇರುವುದು, ಹರಿಜನ ಗಿರಿಜನರ ಉದ್ಧಾರಕ್ಕೋಸ್ಕರವಾಗಿ. ಇವತ್ತು ಹರಿಜನ ಗಿರಿಜನರಲ್ಲಿ ಎಸ್.ಎಸ್.ಎಲ್.ಸಿ ಆದವರು, ಟ್ರೈನಿಂಗ್ ಆದವರು ಬಹಳಷ್ಟು ಜನ ಇದ್ದು ಕೆಲಸವಿಲ್ಲದೆ ಬೀದಿಬೀದಿಗಳಲ್ಲಿ ಅಲೆಯುತ್ತಿರುವಾಗ ಅವರ ಹಿತರಕ್ಷಣೆ ಮಾಡಬೇಕೆಂಬ ಮನಸ್ಸು ನಿಮಗೆ ಬರುತ್ತಿಲ್ಲವೆ ? ಈ ನ್ಯೂನತೆಯನ್ನು ಸರಿಪಡಿಸುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.—ತಾವು ಹೇಳುತ್ತಿರುವುದು ಕೇವಲ ೨-೩ ಜಿಲ್ಲೆಗಳಿಗೆ ಮಾತ್ರ ಸಂಬಂಧಪಟ್ಟದ್ದು. ನಾವು ಈ ವರ್ಷದ ಜನವರಿಗೆ ಅನ್ಯಾಯ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡಿಲ್ಲ. ಆದರೂ ಈ ವಿಚಾರವನ್ನು ಪರಿಶೀಲಿಸಿ ನೋಡುತ್ತೇವೆ.

ಶ್ರೀ ಎಸ್. ಎಸ್. ಅರಕೇರಿ.—ಸುಮಾರು ೨೫೦-೩೦೦ರ ವರೆಗೂ ಮಹಿಳಾ ಸಂಘಟಿಕರುಗಳ ಹುದ್ದೆ ಖಾಲಿ ಇವೆಯೆಂದು ನಾವು ಕೇಳಿದ್ದೇವೆ. ತಾವು ಆದಷ್ಟು ಬೇಗ ಈ ಹುದ್ದೆಗಳನ್ನು ಭರ್ತಿಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.—ಹರಿಜನ ಮಹಿಳೆಯರಿಂದ ಎಷ್ಟು ಅರ್ಜಿಗಳು ಬರುತ್ತವೋ ಅಷ್ಟನ್ನೂ ಪರಿಶೀಲಿಸಿ ಸದರಿ ಹುದ್ದೆಗಳಿಗೆ ಭರ್ತಿ ಮಾಡಲು ಪ್ರಯತ್ನ ಮಾಡುತ್ತೇವೆ.

Minor Irrigation Schemes in Varthur Hobli Bangalore South Taluk

112. SRI B.V. RAMACHANDRA REDDY (Varthur).—Will the Minister for Transport and Minor Irrigation be pleased to state :—

(a) when the following three schemes were surveyed and estimated, Lift Irrigation Schemes in Varthur Hobli, Bangalore South Taluk, Bangalore District :

A. Harmare Scheme

B. Doddakanneili Scheme

C. High Level Channel of Bellandur Scheme

(b) the reasons for delay in implementing these schemes ;

(c) now though the above schemes have a budget provision against each scheme why the Govt. is delaying taking up of execution of these schemes;

(d) the date on which the execution of the above schemes has commenced and the proposed completion date of these schemes ?

SRI. M. M. J. SADYOJATHA (Minister for Transport and Minor Irrigation).—

(a) A. Harloor Lift Irrigation Scheme (Harmare Scheme) was surveyed and estimates got up during 1977-78.

B. Doddakannehalli Lift irrigation scheme surveyed and estmates got up during 1977-78.

C. Bellandur scheme surveyed and estimates got up during 1977-78.

(b There is no delay in implementing the Schemes.

(c) Does not arise in view of reply to sub-question (b).

(d) These three Schemes are included in the M.I. Programme for 1979-80. They are accorded administrative approval during 1979-80

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಸ್ವಾಮಿ, ನನ್ನ (ಇ) ಪ್ರಶ್ನೆ 'ಮೇಲ್ಕಂಡ ಯೋಜನೆಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದಕ್ಕೆ ಆಯವ್ಯಯದ ಮುಂಗಡ ಪತ್ರದಲ್ಲಿ ಅವಕಾಶವನ್ನು ಕಲ್ಪಿಸಿದ್ದೀರಾ ? ಈ ಯೋಜನೆಗಳನ್ನು ಸರ್ಕಾರದವರು ಕಾರ್ಯರೂಪಕ್ಕೆ ತರುವಲ್ಲಿ ವಿಳಂಬವಾಗಲು ಕಾರಣವೇನು ?'' ಎಂಬುದಕ್ಕೆ ಸಚಿವರು ಸಮರ್ಪಕ ಉತ್ತರವನ್ನೇ ಕೊಟ್ಟಿಲ್ಲ. ಕಾರಣವೇನು ?

† ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಹಣವನ್ನೊದಗಿಸಲು ಸೂಕ್ತ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ಸ್ವಾಮಿ, ಈ ಯೋಜನೆಯನ್ನು ಯಾವ ದಿನಾಂಕದಂದು ಪ್ರಾರಂಭಿಸಲಾಗಿದೆ ಎಂಬುದನ್ನು ನಾನು ಸ್ಪಷ್ಟವಾಗಿ ಕೇಳಿದ್ದೇನೆ. ಆದರೆ ತಾವು ಇದಕ್ಕೆ ಸಮರ್ಪಕ ಉತ್ತರ ಕೊಟ್ಟಿಲ್ಲ.

ಶ್ರೀ ಎಂ.ಎಂ.ಜೆ. ಸದ್ಯೋಜಾತ. ಈಗಾಗಲೇ ಈ ಕೆಲಸ ಪ್ರಾರಂಭವಾಗಿದೆ.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ಯಾವುದೇ ಒಂದು ಕಾಮಗಾರಿಗಾದರೂ ಪ್ರಾರಂಭಮಾಡಿದ ದಿನ ಮತ್ತು ಮುಗಿಸಿದ ದಿನ ಇದ್ದೇ ಇರುತ್ತವೆ. ತಾವು ಈ ಯೋಜನೆಯನ್ನು ಪ್ರಾರಂಭ ಮಾಡಿದ ದಿನವನ್ನು ತಿಳಿಸಬೇಕು.

ಶ್ರೀ ಎಂ.ಎಂ.ಜೆ ಸದ್ಯೋಜಾತ.—ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಒದಗಿಸುತ್ತೇನೆ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಹೊಂಗಲಿ ಈ ಕಾಮಗಾರಿಯನ್ನು ಮುಗಿಸಲು ಯಾವ ದಿನಾಂಕವನ್ನು ಗೊತ್ತುಮಾಡಿಕೊಂಡಿದ್ದೀರಿ ಅದನ್ನಾದರೂ ಹೇಳುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಆದಷ್ಟು ಜಾಸ್ತಿತೆ ಮುಗಿಸುವ ಉದ್ದೇಶ ಇಟ್ಟು ಕೊಂಡಿದ್ದೇವೆ.

ಶ್ರೀ ಬಿ ವಿ. ರಾಮಚಂದ್ರ ರೆಡ್ಡಿ.—ಈ ಕಾಮಗಾರಿ ಯಾವ ಹಂತದಲ್ಲಿದೆ, ಹಾಗೂ ಆಯವ್ಯಯ ಅಂದಾಜಿನಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬುದನ್ನಾದರೂ ತಿಳಿಸಲು ಸಾಧ್ಯವಾಗುತ್ತದೆಯೆ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಆ ವಿವರ ನನ್ನ ಹತ್ತಿರ ಇಲ್ಲ. ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ನೀಡುತ್ತೇನೆ.